# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 01. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 105 |
| 02. | ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮ ನಿರ್ದೇಶನ ಹೊಂದಿದವರು) |
| 03. | ಉತ್ತರಿಸುವ ದಿನಾಂಕ | : 13.02.2023 |
| 04. | ಉತ್ತರಿಸುವ ಸಚಿವರು. | : ಗೃಹ ಸಚಿವರು |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td><td rowspan="2">ರಾಜ್ಯದಲ್ಲಿ ಕಳೆದ 03 ವರ್ಷಗಳಲ್ಲಿ ದಾಖಲಾದ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳ ಅಂಕಿ-ಅಂಶಗಳು ಈ ಕೆಳಕಂಡಿರುತ್ತದೆ.
<table>
<tr><th>Year</th><th>Cruelty by Husband</th><th>DP Act</th><th>Dowry Deaths</th><th>Molestation</th><th>Rape</th></tr>
<tr><td>2020</td><td>2026</td><td>1537</td><td>176</td><td>4544</td><td>479</td></tr>
<tr><td>2021</td><td>2289</td><td>1872</td><td>157</td><td>4913</td><td>559</td></tr>
<tr><td>2022</td><td>2796</td><td>2221</td><td>163</td><td>5856</td><td>539</td></tr>
<tr><td>2023 (upto Jan 31st)</td><td>216</td><td>153</td><td>5</td><td>456</td><td>29</td></tr>
</table>
</td></tr>
<tr><td>ಆ</td><td>ಕಳೆದ 03 ವರ್ಷಗಳಿಂದ ಎಷ್ಟು ದೌರ್ಜನ್ಯ ಪ್ರಕರಣಗಳು ದಾಖಲಾಗಿದೆ: (ಸಂಪೂರ್ಣ ವಿವರ ನೀಡುವುದು)</td></tr>
<tr><td>ಇ</td><td>ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಹಾಗೂ ಅಪರಾಧ ಪ್ರಕರಣಗಳಲ್ಲಿ ಶಿಕ್ಷೆ ಆದವರ ಸಂಖ್ಯೆ ಎಷ್ಟು? (ವಿವಿರ ನೀಡುವುದು)</td><td>ರಾಜ್ಯದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಡೆಗಟ್ಟಲು ಸರ್ಕಾರವು ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿದೆ.<br><br>➢ ಮಹಿಳೆಯ ಮತ್ತು ಮಕ್ಕಳ ಸುರಕ್ಷತೆ, ತ್ವರಿತ ನೆರವು ಸ್ಪಂದನೆಗಾಗಿ ರಾಜ್ಯದಲ್ಲಿ ಮೊದಲ ಹಂತದಲ್ಲಿ 700 ಪೊಲೀಸ್ ಠಾಣೆಗಳಲ್ಲಿ ವುಮೆನ್ ಹೆಲ್ಪ್ ಡೆಸ್ಕ್‌ಗಳನ್ನು ಮತ್ತು ಎರಡನೇ ಹಂತದಲ್ಲಿ 100 ಹಾಗೂ 3ನೇ ಹಂತದಲ್ಲಿ 250 ರಂತೆ ಒಟ್ಟು 1050 ವುಮೆನ್ ಹೆಲ್ಪ್ ಡೆಸ್ಕ್‌ಗಳನ್ನು ಕೇಂದ್ರ ಸರ್ಕಾರದ ಅನುದಾನದಿಂದ ಸ್ಥಾಪಿಸಲಾಗಿರುತ್ತದೆ.<br><br>➢ ಸಾರ್ವಜನಿಕ ಸ್ಥಳಗಳಲ್ಲಿ ಕರಪತ್ರ, ಭಿತ್ತಿಪತ್ರ, ಬ್ಯಾನರ್ಸ್ ಪೋಸ್ಟರ್‌ಗಳು ಪ್ರಕಟಿಸುವುದು ಹಾಗೂ ಸಣ್ಣ ನಾಟಕಗಳು, ಚಿತ್ರಕಲೆಯ ಸ್ಪರ್ದೆ ಏರ್ಪಡಿಸುವುದು, ಮತ್ತು ಮಹಿಳಾ ದೌರ್ಜನ್ಯದ ಬಗ್ಗೆ ಪೊಲೀಸರಿಗೆ</td></tr>
</table>

| | | |
|---|---|---|
| | | ಮಾಹಿತಿ ಒದಗಿಸುವಂತೆ ಜನ ಜಾಗೃತಿ ಕಾರ್ಯಕ್ರಮಗಳನ್ನು ಏರ್ಪಡಿಸಿ ಅರಿವು ಮೂಡಿಸಲಾಗುತ್ತಿದೆ.<br>➢ ದೂರುದಾರರುಗಳಿಗೆ/ ಸಂತ್ರಸ್ತರುಗಳಿಗೆ ಪ್ರತಿ ಪೊಲೀಸ್ ಠಾಣೆಗಳಲ್ಲಿ ಅಧಿಕಾರಿಗಳನ್ನು ಸಂಪರ್ಕಿಸಲು ಅವರುಗಳ ದೂರವಾಣಿ ಸಂಖ್ಯೆಗಳುಳ್ಳ ಫಲಕಗಳನ್ನು ಹಾಕಲಾಗಿದೆ.<br>➢ ಅತ್ಯಾಚಾರಕ್ಕೆ ಒಳಗಾಗಿ ನೊಂದವರಿಗೆ ಕರ್ನಾಟಕ ಸಂತ್ರಸ್ಥರ ಪರಿಹಾರ ನಿಧಿ ಯೋಜನೆಯಡಿಯಲ್ಲಿ 3ಲಕ್ಷ ರೂಗಳ ಪರಿಹಾರ ಧನ ವಿತರಿಸಲಾಗುತ್ತಿದೆ.<br>➢ ಕಮ್ಯುನಿಟಿ ಪೊಲೀಸಿಂಗ್ ಮೂಲಕ ಜನಸಂಪರ್ಕ ಮತ್ತು ಜನಸ್ನೇಹಿ ಸಭೆಗಳನ್ನು ನಡೆಸಲಾಗುತ್ತಿದೆ.<br>➢ ಮಹಿಳೆಯರ ಸುರಕ್ಷತೆಯ ಬಗ್ಗೆ ಹೆಚ್ಚಿನ ಆದ್ಯತೆ ಕೊಟ್ಟು ಮಹಿಳಾ ಸಹಾಯವಾಣಿ ಕೇಂದ್ರ "ಸ್ಪಂದನ"ವನ್ನು ಬೆಂಗಳೂರು ನಗರದ ಮಲ್ಲೇಶ್ವರಂ ಮತ್ತು ಬಸವನಗುಡಿಯಲ್ಲಿ ತೆರೆಯಲಾಗಿದೆ.<br>➢ ಕಷ್ಟದಲ್ಲಿರುವ ಮಹಿಳೆಯರ ಸಹಾಯಕ್ಕಾಗಿ ಮಹಿಳಾ ಸಹಾಯವಾಣಿ ಸಂಖ್ಯೆ: 1091 ಮತ್ತು 22943225 ಕಾರ್ಯ ನಿರ್ವಹಿಸುತ್ತಿವೆ.<br>➢ ಅತ್ಯಾಚಾರ ಪ್ರಕರಣಗಳ ತನಿಖೆಯನ್ನು ಅಪರಾಧ ಕಾನೂನು ತಿದ್ದುಪಡಿ ಸುಗ್ರೀವಾಜ್ಞೆ, 2018, ರಲ್ಲಿನ ತಿದ್ದುಪಡಿಯಂತೆ ನಿಗಧಿಪಡಿಸಿರುವ 60 ದಿನಗಳ ಕಾಲಮಿತಿಯಲ್ಲಿ ತನಿಖೆಯನ್ನು ಪೂರ್ಣಗೊಳಿಸಲು ಸುತ್ತೋಲೆಯನ್ನು ಹೊರಡಿಸಿದೆ.<br>➢ ಸದರಿ ಕಾಯ್ದೆಯ ಪರಿಚಯ, ಕಾಯ್ದೆಯಲ್ಲಿ ಪ್ರಕರಣಗಳನ್ನು ದಾಖಲಿಸುವಾಗ ಅನುಸರಿಸಬೇಕಾದ ಕ್ರಮಗಳು, ದೌರ್ಜನ್ಯಕ್ಕೊಳಗಾದ ಮಕ್ಕಳೊಂದಿಗೆ ಹೇಗೆ ನಡೆದುಕೊಳ್ಳಬೇಕು, ಅವರ ಆರೈಕೆ, ವೈದ್ಯಕೀಯ ಚಿಕಿತ್ಸೆಗೆ ಒಳಪಡಿಸುವ ಕ್ರಮಗಳು, ಪುನರ್ವಸತಿ, ಮಾಧ್ಯಮಗಳ ಜವಾಬ್ದಾರಿ, ಸಮಾಜದ ಕರ್ತವ್ಯಗಳು, ಪರಿಹಾರ ಒದಗಿಸುವುದು ಹಾಗೂ ಇನ್ನಿತರ ವಿಷಯಗಳ ಕುರಿತು ತನಿಖಾಧಿಕಾರಿಗಳಿಗೆ ಸಹಾಯವಾಗುವ ನಿಟ್ಟಿನಲ್ಲಿ ನಿರ್ದಿಷ್ಟ ಕಾರ್ಯವಿಧಾನ |

| | | |
|---|---|---|
| | | (ಎಸ್.ಓ.ಪಿ) ವನ್ನು ಸಿದ್ಧಪಡಿಸಿ ಎಲ್ಲಾ ಪೊಲೀಸ್ ಠಾಣೆಗಳಿಗೆ ಒದಗಿಸಲಾಗಿದೆ.<br>➢ ದಿನದ 24 ಗಂಟೆಯೂ ಸಹ ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಗಾಗಿ "ಪಿಂಕ್ ಹೊಯ್ಸಳ" ಮತ್ತು ಇತರೆ ಹೆಸರುಗಳಡಿಯಲ್ಲಿ ರಾಜ್ಯದ ನಗರ/ಜಿಲ್ಲೆಗಳಲ್ಲಿ ಗಸ್ತುವಾಹನಗಳು ಗಸ್ತು ಕಾರ್ಯ ನಿರ್ವಹಿಸುತ್ತಿವೆ.<br>➢ ರಾಜ್ಯದ ಇತರೆ ಜಿಲ್ಲೆಗಳಾದ ಬಾಗಲಕೋಟೆ ಜಿಲ್ಲೆಯಲ್ಲಿ ಚನ್ನಮ್ಮ ಪಡೆ, ಬಳ್ಳಾರಿ ಜಿಲ್ಲೆಯಲ್ಲಿ ಓಬವ್ವ ಪಡೆ, ದಾವಣಗೆರೆ ಜಿಲ್ಲೆಯಲ್ಲಿ ದುರ್ಗಾ ಪಡೆ, ಗದಗ ಜಿಲ್ಲೆಯಲ್ಲಿ ಚನ್ನಮ್ಮ ಪಡೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಶರಾವತಿ ಓಬ್ಬವ್ವ ಪಡೆ, ಬೀದರ್ ಜಿಲ್ಲೆಯಲ್ಲಿ ರಾಣಿ ಚನ್ನಮ್ಮ ವಾಹನವು ಹೆಚ್ಚಾಗಿ ಮಹಿಳೆಯರು ಓಡಾಡುವ ಜನನಿಬಿಡ ಸ್ಥಳಗಳಲ್ಲಿ ಹಾಗೂ ಶಾಲಾ ಕಾಲೇಜುಗಳ ಬಳಿ ಹೆಚ್ಚಿನ ಗಸ್ತು ಕಾರ್ಯವನ್ನು ನಿರ್ವಹಿಸುತ್ತಿರುತ್ತದೆ.<br>➢ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ಹತ್ತಿಕ್ಕುವ ನಿಟ್ಟಿನಲ್ಲಿ ಬೆಂಗಳೂರು ನಗರದಲ್ಲಿ "ವೀರವನಿತೆ" ತಂಡವನ್ನು ರಚಿಸಿ, ಸದರಿಯವರಿಗೆ 6 ತಿಂಗಳು ನುರಿತ ತಜ್ಞರಲ್ಲಿ ಸ್ವಯಂ ರಕ್ಷಣೆ ಮತ್ತು ಮಾರ್ಷಿಯಲ್ ಆರ್ಟ್ಸ್ ಬಗ್ಗೆ ತರಬೇತಿ ನೀಡಿ, ನಂತರ ಸದರಿಯವರುಗಳನ್ನು 3 ತಂಡಗಳನ್ನಾಗಿ ರಚಿಸಿ ಮೇಲಾಧಿಕಾರಿಗಳ ನೇತೃತ್ವದಲ್ಲಿ ನಗರದ ವಿವಿಧ ಶಾಲಾ-ಕಾಲೇಜುಗಳು ಮತ್ತು ಮಹಿಳೆಯರು ಹೆಚ್ಚಾಗಿ ಕೆಲಸ ನಿರ್ವಹಿಸುವ ಗಾರ್ಮೆಂಟ್ಸ್ ಕಾರ್ಖಾನೆಗಳು, ಮಾಲ್ ಮತ್ತಿತರ ಕಡೆಗಳಲ್ಲಿ ಸದರಿಯವರುಗಳಿಗೆ ಸ್ವಯಂ ರಕ್ಷಣೆಯ ಬಗ್ಗೆ ಮಾಹಿತಿ ಹಾಗೂ ತರಬೇತಿಗಳನ್ನು ನೀಡಲಾಗಿರುತ್ತದೆ.<br>➢ ಬೆಂಗಳೂರು ನಗರದಲ್ಲಿ "ಸೇಫ್ ಸಿಟಿ ಫಾರ್ ಸೇಫ್ಟಿ ಆಫ್ ವುಮೆನ್" ಯೋಜನೆಯಡಿ ಮಹಿಳೆಯರ ಸುರಕ್ಷತೆಯ ಸಲುವಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ. |

| | | |
|---|---|---|
| | | ▪ ನಗರದ 1640 ಸ್ಥಳಗಳಲ್ಲಿ ಒಟ್ಟು 4100 ಸಿಸಿ ಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ.<br>▪ ವಿವಿಧ ಸ್ಥಳಗಳಲ್ಲಿ ಒಟ್ಟು 30 ಸೇಫ್ಟಿ ಐಲ್ಯಾಂಡ್‌ಗಳನ್ನು ಗುರುತಿಸಲಾಗಿದೆ.<br>▪ ಒಂದು ಮೊಬೈಲ್ ಕಮಾಂಡ್ ಅಂಡ್ ಕಂಟ್ರೋಲ್ ವಾಹನ ಖರೀದಿಸಿದ್ದು, ಇದಕ್ಕೆ ಅಗತ್ಯವಿರುವ ಫ್ಯಾಬ್ರಿಕೇಷನ್ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ.<br>▪ ಒಟ್ಟು 400 ಬಾಡಿ ವೋರ್ನ್ ಕ್ಯಾಮೆರಾಗಳನ್ನು ಖರೀದಿಸಲಾಗಿದೆ.<br>▪ ವಿವಿಧ ಸ್ಥಳಗಳಲ್ಲಿ 96 ವೀಕ್ಷಣಾ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಇವು ಕಾರ್ಯನಿರ್ವಹಣೆಯಲ್ಲಿವೆ.<br>▪ ತಾತ್ಕಾಲಿಕ ಡೇಟಾ ಸೆಂಟರ್‌ನ್ನು ಸ್ಥಾಪಿಸಲಾಗಿದ್ದು, ಪ್ರಸ್ತುತ ಕಾರ್ಯನಿರ್ವಹಣೆಯಲ್ಲಿದೆ.<br>▪ 8 ಡ್ರೋನ್ ಕ್ಯಾಮೆರಾಗಳನ್ನು ಖರೀದಿಸಿ ಬಳಸಲಾಗುತ್ತಿದೆ.<br><br>ದಾಖಲಾದ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಶಿಕ್ಷೆಯಾದವಲ್ಲಿ 2020 ರಿಂದ Cruelty by husband ಪ್ರಕರಣಗಳಲ್ಲಿ 06 ವ್ಯಕ್ತಿಗಳು, molestation ಪ್ರಕರಣಗಳಲ್ಲಿ 22 ಹಾಗೂ rape ಪ್ರಕರಣಗಳಲ್ಲಿ 4 ವ್ಯಕ್ತಿಗಳ ಮೇಲೆ ಶಿಕ್ಷೆ ವಿಧಿಸಲಾಗಿರುತ್ತದೆ. |

**HD 01 SDN 2023**

(ಆರಗ ಜ್ಞಾನೇಂದ್ರ)
ಗೃಹ ಸಚಿವರು.